**ಸಾಕ್ಷಿಗೆ ದಿನಾಂಕಃ26-10-2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರಿದ ಪಾಟೀ ಸವಾಲು :: ವಾದಿ ಪರ ಶ್ರೀ. V R N ವಕೀಲರಿಂದ ::**

1. ವಾದಿ ಹಾಗೂ ನಮ್ಮ ಕುಟುಂಬಕ್ಕೂ ವಾದಿಯು ಮದುವೆಯಾದ ಸಮಯದಿಂದ ಅಷ್ಟಾಗಿ ಸಂಪರ್ಕ ಇರುವುದಿಲ್ಲ. ನನ್ನ ದಿವಂಗತ ಪತಿ ಹಿಂದೆ ಗ್ರಾಮಲೆಕ್ಕಾಧಿಕಾರಿ ಆಗಿದ್ದರು ಹಾಗೂ ನಂತರದಲ್ಲಿ ರಾಜಸ್ವ ನಿರೀಕ್ಷಕರಾಗಿ ನಿವೃತ್ತಿ ಹೊಂದಿದ್ದರು. ನನ್ನ ಪತಿ ಶೃಂಗೇರಿ ತಾಲ್ಲೂಕಿನಲ್ಲಿಯೂ ಸಹ ಹಿಂದೆ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು ಎಂದರೆ ಸರಿ. ಅವರು ಯಾವ ಇಸವಿಯಲ್ಲಿ ನಿವೃತ್ತರಾಗಿರುತ್ತಾರೆ ಎಂದು ನನಗೆ ನಿಖರವಾಗಿ ನೆನಪಿಲ್ಲ, ಆದರೆ ಅವರು ನಿವೃತ್ತರಾಗಿ ಸುಮಾರು 15 ವರ್ಷ ಆಗಿರಬಹುದು.

2. ನನ್ನ ಪತಿ ಸರ್ಕಾರಿ ಕೆಲಸದಲ್ಲಿದ್ದ ಕಾರಣ ನಮ್ಮ ಕುಟುಂಬದ ಆಸ್ತಿಗಳ ವ್ಯವಹಾರದ ಬಗ್ಗೆ ಸಲಹೆಗಳನ್ನು ನನ್ನ ಅತ್ತೆ ಶಾಂತ ಲಕ್ಷ್ಮಮ್ಮ ರವರು ಅವರಿಂದ ಕೇಳಿ ಪಡೆಯುತ್ತಿದ್ದರು ಎಂದರೆ ಸರಿ. ನನ್ನ ಮಾವ ತೀರಿಕೊಂಡ ನಂತರ ಕುಟುಂಬದ ಆಸ್ತಿಗಳ ಬಗ್ಗೆ ನನ್ನ ಅತ್ತೆ ಏನೆಲ್ಲಾ ವ್ಯವಹಾರಗಳನ್ನು ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ವಾದಿ ಹಾಗೂ ಅವರ ಸಹೋದರರು ಮತ್ತು ತಾಯಿ ಕುಟುಂಬದ ಆಸ್ತಿಗಳ ಬಗ್ಗೆ ಏನೆಲ್ಲಾ ವ್ಯವಹಾರಗಳನ್ನು ಮಾಡಿಕೊಂಡಿರುತ್ತಾರೆ ಎಂಬ ಬಗ್ಗೆಯೂ ಸಹ ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. 2017 ರಲ್ಲಿಯೂ ಸಹ ಸಹ ವಾದಿ ಹಾಗೂ ಅವರ ಸಹೋದರರು ಕುಟುಂಬದ ಆಸ್ತಿಗಳ ಬಗ್ಗೆ ಏನೆಲ್ಲಾ ವ್ಯವಹಾರಗಳನ್ನು ಮಾಡಿಕೊಂಡಿರುತ್ತಾರೆ ಎಂಬ ಬಗ್ಗೆಯೂ ಸಹ ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ.

3. ನಾನು ಹಿಂದೆ ನನ್ನ ಅತ್ತೆ ರವರು ಅಟ್ಟದಿಂದ ಬಿದ್ದು, ಪೆಟ್ಟು ಮಾಡಿಕೊಂಡಿರುವುದಾಗಿ ತಿಳಿಸಿದ್ದು ಅದರ ನಂತರದಲ್ಲಿ ಅವರು ಕುಟುಂಬದ ಆಸ್ತಿಗಳ ಬಗ್ಗೆ ಏನೆಲ್ಲಾ ವ್ಯವಹಾರ ಮಾಡಿಕೊಂಡಿರುತ್ತಾರೆ ಎನ್ನುವ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಗೆ 1/9 ನೇ ಹಕ್ಕು ಮತ್ತು ಅಷ್ಟೇ ಭಾಗ ಬರಬೇಕಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿಗಳಾದ ನಮ್ಮಲ್ಲಿ ಹಲವಾರು ಬಾರಿ ದಾವಾ ಆಸ್ತಿಗಳಲ್ಲಿ ಭಾಗ ಕೊಡಬೇಕೆಂದು ಕೇಳಿದ್ದರು ಸಹ ನಾವುಗಳು ಅದನ್ನು ವಿನಾಃ ಕಾರಣ ಮುಂದೂಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ.

4. ಅದೇ ರೀತಿ ನನ್ನ ಅತ್ತೆ ಶಾಂತಲಕ್ಷ್ಮೀ ರವರ ಇತರೇ ಮಕ್ಕಳಿಗೂ ಸಹ ದಾವಾ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯು 2017 ರ ನವೆಂಬರ್ ತಿಂಗಳಿನಲ್ಲಿ ಪ್ರತಿವಾದಿಗಳಾದ ನಮ್ಮಲ್ಲಿ ದಾವಾ ಆಸ್ತಿಗಳಲ್ಲಿ ಅವರಿಗೆ ಬರಬೇಕಾದ ಆಸ್ತಿಗಳನ್ನು ಬಿಟ್ಟು ಕೊಡುವಂತೆ ಕೇಳಿದಾಗ ನಾವುಗಳು ನಿರಾಕರಿಸಿರುತ್ತೇವೆ ಎಂದರೆ ಸರಿಯಲ್ಲ.

5. ನಿಪಿ-2 ವಿಭಾಗ ಪತ್ರವು ದಾವಾ ಆಸ್ತಿಗಳಲ್ಲಿನ ವಾದಿಯ ಭಾಗಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿನ ಭಾಗವನ್ನು ಹೊರತು ಪಡಿಸಿ, ಮದ್ಯಕಾಲಿಕ ಲಾಭವನ್ನು ಸಹ ಪ್ರತಿವಾದಿಗಳಾದ ನಾವುಗಳು ನೀಡಲು ಬಾದ್ಯಸ್ಥರಾಗಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನ್ನ ದಿವಂಗತ ಪತಿ ಯಾವ ವಿಷಯಗಳನ್ನು ಹೇಳಿ ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ ಎಂಬ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ವಾದಿಗೆ ತಿಳಿಸದೇ ಹಾಗೂ ಅವರ ಬೆನ್ನ ಹಿಂದೆ ದಾವಾ ಸ್ವತ್ತುಗಳಿಗೆ ಸಂಬಂಧ ಪಟ್ಟಂತೆ ಇತರೆ ಪ್ರತಿವಾದಿಗಳಿಗೆ ದಾವಾ ಆಸ್ತಿಗಳಲ್ಲಿನ ಕೆಲವು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿನ ಕೆಲವು ಆಸ್ತಿಗಳನ್ನು ಪ್ರತಿವಾದಿ 12 ರಿಂದ 15 ರವರಿಗೆ ಯಾವ ಸಮಯದಲ್ಲಿ ಮಾರಾಟ ಮಾಡಲಾಗಿರುತ್ತದೆ ಎಂಬ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**::ಮರುವಿಚಾರಣೆ ಇಲ್ಲ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-

ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ

ಶೃಂಗೇರಿ.